# ಮರೆಯಲ್ಲಿರುವ ಮನೆ ಸಂಗಾತಿಗಳು: ನಮ್ಮ ಮನೆಯಲ್ಲೇ ಇರುವ ಪ್ರಕೃತಿಯನ್ನು ತಿಳಿಯುವ

ಆ ಗೋಡೆಯ ಮೇಲಿನ ಬಣ್ಣದ ತುಣುಕು ಚಲಿಸುತ್ತಿದೆಯೇ? ನಾನು ರಾತ್ರಿ ಮಲಗಿದ್ದಾಗ ಅಡುಗೆ ಮನೆಯಲ್ಲಿನ ಆಹಾರದ ಸಣ್ಣ ಚೂರುಗಳನ್ನು ಶುದ್ಧ ಮಾಡಿದ್ದು ಯಾರು? ಆ ಗೋಡೆಯ ಮೂಲೆಯಲ್ಲಿರುವ ಬಿಳಿ ಟೆಂಟ್ ಒಳಗೆ ಯಾರಿದ್ದಾರೆ?

ಇಂತಹ ಪ್ರಶ್ನೆಗಳನ್ನು ನೀವು ನಿಮ್ಮನ್ನೇ ಕೇಳಿಕೊಳುತ್ತಾ ಬಂದಿದ್ದೀರಾ? ನಮ್ಮ ಮನೆಗಳಲ್ಲಿ, ಬಾಲ್ಕನಿಗಳಲ್ಲಿ (ಉಪ್ಪರಿಗೆ ಮೊಗಸಾಲೆಯಲ್ಲಿ), ಕೈತೋಟಗಲ್ಲಲಿ ಮತ್ತು ಗೋಡೆಗಳ ಮೇಲೆ ಅದೆಷ್ಟು ಜೀವವೈವಿಧ್ಯತೆ ಶಾತಿಯಿಂದ ವಾಸಿಸುತ್ತಿವೆ. ಕಳೆದ ವರ್ಷದ ಲಾಕ್‌ಡೌನ್ ಸಂದರ್ಭ ಅವುಗಳ ಜೊತೆಗೆ ಕಾಲ ಕಳೆಯುವ ಅವಕಾಶವನ್ನು ಮಾಡಿಕೊಟ್ಟಿತು. ಆದ್ದರಿಂದ, ಪ್ರಕೃತಿಯೊಂದಿಗೆ ಕಾಲ ಕಳೆಯುವ ನೂತನ ಮಾರ್ಗವನ್ನು ನಾವು ಕಂಡುಹಿಡಿದೆವು.

ಆದರೆ, ಮೊದಲೆನೆಯದಾಗಿ ಈ "ಪ್ರಕೃತಿ" ಎಂದರೇನು ನೋಡೋಣ? ನೀವು ಸಹಜ ಪ್ರಪಂಚವನ್ನು ಎಲ್ಲಿ ಕಾಣಬಲ್ಲಿರಿ? ಪ್ರಕೃತಿಯ ಅದ್ಭುತಗಳನ್ನು ಅನುಭವಿಸುವುದಕ್ಕೆ ಯಾವಾಗಲೂ ದೂರದ ಕಾಡುಗಳಿಗೇ ಹೋಗಬೇಕೇ?

ಮೇಜಿನ ಕೆಳಗೆ, ಚಿತ್ರಪಟದ ಚೌಕಟ್ಟಿನ ಹಿಂದೆ ನೋಡುವುದರಿಂದ, ನಿರಂತರವಾಗಿ ಹೊಮ್ಮುತ್ತಿರುವ ಶಬ್ದವನ್ನೇ ಅನುಸರಿಸುವುದರಿಂದ ಅಥವಾ ಧಾನ್ಯದ ಚೀಲದೊಳಗೆ ಇಣುಕಿ ನೋಡಿದರೂ ಸಾಕು, ನಿಮಗೆ ಬೇರೆಯೇ ಒಂದು ವಸತಿಯನ್ನು ಅನ್ವೇಷಿಸಲು ಸಾಧ್ಯವಾಗುವುದು! ಇಂತಹ "ಮರೆಯಲ್ಲಿರುವ ಮನೆ ಸಂಗಾತಿ" ಗಳನ್ನು ಬಯಲು ಮಾಡಿ, ವೀಕ್ಷಿಸಿ ದಾಖಲಿಸುವುದು ಒಂದು ಉತ್ತೇಜಕ ಚಟುವಟಿಕೆಯಾಗಬಲ್ಲದು!

ಯಾರು ಬೇಕಾದರೂ ಡೌನ್‌ಲೋಡ್ ಮಾಡಬಹುದಾದ, ಪ್ರಿಂಟ್ ತೆಗೆಯಬಹುದಾದ ಅಥವಾ ತಮ್ಮ ನೋಟ್‌ಪುಸ್ತಕದಲ್ಲೇ ಬರೆದುಕೊಳ್ಳಬಹುದಾದ ಮೂರ ಬಿಂಗೋ ಹಾಳೆಗಳನ್ನು ಮತ್ತು ಚಟುವಟಿಕೆಗಳನ್ನು ನಾವು ಸಿದ್ಧಪಡಿಸಿದ್ದೇವೆ. ಇವುಗಳ ಮೂಲಕ ತಮ್ಮ ಮನೆಯಲ್ಲಿ ಮತ್ತು ಸುತ್ತಮುತ್ತಲೂ ಇರುವ ಪ್ರಕೃತಿಯ ಬಗ್ಗೆ ಹೆಚ್ಚು ತೀಲಿದುಕೊಳ್ಳಬಹುದಾಗಿದೆ. ಈ ಹಾಳೆಗಳನ್ನು https://www.ncf-india.org/blog/hidden-housemates-part-1 ಎಂಬಲ್ಲಿ ಕಾಣಬಹುದಾಗಿದೆ. ಪ್ರತಿಯೊಂದು ಹಾಳೆಯೂ ಇಂತಹ ಒಂಭತ್ತು ಮರೆಯಲ್ಲಿರುವ ಗೃಹಸಂಗಾತಿಗಳನ್ನು ನಿಮಗೆ ಪರಿಚಯಿಸುತ್ತದೆ. ಈ ಬಿಂಗೋ ಹಾಳೆಗಳನ್ನು ಮಾರ್ಗದರ್ಶಿಯಾಗಿಟ್ಟುಕೊಂಡು ನೀವಿರುವ ಸ್ಥಳದಲ್ಲಿಯೇ ಈ ಗೃಹಸಂಗಾತಿಗಳನ್ನು ಹುಡುಕುತ್ತಾ ಹೋಗಬಹುದು.

ನೀವು ಅವುಗಳನ್ನು ಹುಡುಕಿದಾಕ್ಷಣ ನಿಮಗೆ ಅವು ಯಾವುವು ಎಂದೋ ಅಥವಾ ಒಂದು ನಿಶ್ಚಿತ ರೀತಿಯಲ್ಲಿ ವರ್ತಿಸುವುದಾದರು ಏಕೆ ಎಂದೋ ಅನೇಕ ಪ್ರಶ್ನೆಗಳು ಏಳಬಹದುದು.ಎಲ್ಲಾ ವಯಸ್ಸಿನವರಿಗೂ ಸರಿಹೊಂದುವ ವಿಶೇಷ ರೀತಿಯಲ್ಲಿ ಪ್ರಸ್ತುತಪಡಿಸಿರುವ ಸಂಪನ್ಮೂಲಗಳ ಮತ್ತು ಚಟುವಟಿಕೆಗಳ ಒಂದು ಪಟ್ಟಿಯ ನೆರವಿನಿಂದ ನೀವು ಬಿಂಗೋ ಹಾಳೆಗಳ ಸಹಾಯದಿಂದ ಪ್ರತಿಯೊಂದು ಮನೆಸಂಗಾತಿಗಳ ಬಗ್ಗೆ ಹೆಚ್ಚು ತಿಳಿಯಬಹುದು. ಇಂಗ್ಲಿಷ್ ಭಾಷೆಯಲ್ಲಿ ಮಾತ್ರವಷ್ಟೆ ಅಲ್ಲದೆ ಕನ್ನಡ ಮತ್ತು ಹಿಂದಿ ಭಾಷೆಗೆ ರೂಪಾಂತರಿತಗೊಳಿಸಿರುವ ಚಟುವಟಿಕೆ ಹಾಳೆಗಳು ಸಹ ಲಭ್ಯವಿವೆ.

ನಾಲ್ಕು ಹೆಜ್ಜೆ ನಡೆಯಲು ಸಿದ್ಧರಾಗಿ. ಕಿಟಕಿಯ ಹೊರಗೆ ಕಣ್ಣು ಹಾಯಿಸಿ ಇಲ್ಲವೆ ಹೂಕುಂಡದ ಕೆಳಗೆ ಇಣುಕಿ. ಅದೋ! ಅವಿತುಕೊಂಡಿರುವ ನಿಮ್ಮ ಮನೆ ಸಂಗಾತಿಗಳನ್ನು ನೋಡುವಿರಿ!

**ಮರೆಯಲ್ಲಿರುವ ಮನೆಸಂಗಾತಿಗಳು (1)**

ನಿಮ್ಮ ಮನೆಯ ಸುತ್ತಲೂ ನೋಡಿ ಅಥವಾ ಕಿಟಕಿಯ ಮೂಲಕವೂ ಬಾಗಿಲ ಹಿಂದೆಯೋ, ಹೂಕುಂಡದ ಕೆಳಗೋ ಕಣ್ಣು ಹಾಯಿಸಿ– ಈ ಕೆಳಗಿನ ಯಾವುದೇ ಸಂಗಾತಿಯನ್ನು ಗುರುತಿಸಿ. **ಬಿಂಗೋ!** ಎನ್ನಿರಿ

| | | |
|---|---|---|
| **ಪಕ್ಷಿಗಾನ** | **ಪ್ರಾಣಿಯಂತೆ ತೋರಿಬರುವ ಮೋಡಗಳು** | **ಬಲ್ಬ್‌ಗಳ ಸುತ್ತವಿರುವ ಕೀಟಗಳು** |
| **ಬಣ್ಣದ ಹೊಸ ಉಡುಪುಗಳನ್ನು ಧರಿಸಿರುವ ಮರಗಳು** | **ಉದ್ದಕಾಲಿನ ಜೇಡ/ಜೇಡರ ಬಲೆ ನೆಯ್ಯುವ ಜೇಡ** | **ಬೆಳ್ಳಿ ಹುಳು ಇರುವ ಪುಸ್ತಕ** |
| **ಗುಂಗರುಕಣ್ಣೋಣ** | **ದವಸಧಾನ್ಯಗಳಲ್ಲಿರುವ ವಾಡೆ ಹುಳು** | **ಗೋಡೆಯ ಮೇಲಿರುವ ಹಲ್ಲಿ (ಗೃಹಗೌಳಿ)** |

**ಮರೆಯಲ್ಲಿರುವ ಮನೆಸಂಗಾತಿಗಳು (2)**

ನಿಮ್ಮ ಮನೆಯ ಸುತ್ತಲೂ ನೋಡಿ ಅಥವಾ ಕಿಟಕಿಯ ಮೂಲಕವೋ, ಬಾಗಿಲ ಹಿಂದೆಯೋ, ಹೂಕುಂಡದ ಕೆಳಗೋ ಕಣ್ಣುಹಾಯಿಸಿ– ಈ ಕೆಳಗಿನ ಯಾವುವಿ ಸಂಗಾತಿಯನ್ನು ಗುರುತಿಸಿ **ಬಿಂಗೋ** ಎನ್ನಿರಿ!

| | | |
|---|---|---|
| ಕಂಬದ/ತಂತಿಯ ಮೇಲೆ ಕುಳಿತಿರುವ ಪಕ್ಷಿ | ಪ್ರಾಕೃತಿಕ ಅಲಂಕಅಾರ ಹಾಗೂ ವಿನ್ಯಾಸ | ಸಾಯಂಕಾಲದ ಸೊಳ್ಳೆಗಳು |
| ಗಾಳಿಗೆ ಕಂಪಿಸುತ್ತಾ ಬೀಳುತ್ತಿರುವ ಎಲೆಗಳು | ನೆಗೆಯುತ್ತಿರುವ ಜೇಡ | ಮಲಗುಚೀಲದಲ್ಲಿನ ಒಂದು ಹುಳ |
| ಜಿರಳೆಗಳು | ಅಡುಗೆ ಮನೆಯ ಇರುವೆಗಳು | ನೊಣಗಳು |

**ನಿಮಗೆ ಜೇಡಕ್ಕಿರುವಂತೆ 8 ಕಣ್ಣುಗಳು ಮತ್ತು 8 ಕಾಲುಗಳು ಇವೆ ಎಂದು ಭಾವಿಸಿ. ಆಗ ನಿಮ್ಮ ಜೀವನ ಹೇಗೆ ಬದಲಾಯಿಸುವುದು? ಆಗ ನಿಮಗೆ ಹೊಸ ಕನ್ನಡಕಗಳು ಬೇಕಾಗುತ್ತವೆಯೇ?ನಿಮ್ಮ ಬಟ್ಟೆಗಳು ಹೇಗೆ ಕಾಣುತ್ತವೆ? ಇದರ ಬಗ್ಗೆ ಒಂದು ಚಿತ್ರವನ್ನೋ ಅಥವಾ ಒಂದು ಹಾಸ್ಯಮಯ ಚುಟುಕನ್ನು ಬರೆಯಿರಿ.**

**ಮರೆಯಲ್ಲಿರುವ ಮನೆಸಂಗಾತಿಗಳು (3)**

ನಿಮ್ಮ ಮನೆಯ ಸುತ್ತಲೂ ನೋಡಿ ಅಥವಾ ಕಿಟಕಿಯ ಮೂಲಕವೋ, ಬಾಗಿಲ ಹಿಂದೆಯೋ, ಹೂಕುಂಡದ ಕೆಳಗೋ ಕಣ್ಣುಹಾಯಿಸಿ– ಈ ಕೆಳಗಿನ ಯಾವುವಿ ಸಂಗಾತಿಯನ್ನು ಗುರುತಿಸಿ **ಬಿಂಗೋ** ಎನ್ನಿರಿ!

| | | |
|---|---|---|
| **ಅಳಿಲಿನ ಕೂಗು** | **ಪ್ರಕೃತಿಯನ್ನು ಕುರಿತ ಕಥೆ ಅಥವಾ ಪುಸ್ತಕ** | **ಹುಡಿತಿಗಣೆ** |
| **ಗೋಡೆಯನ್ನೋ ಕಿಟಕಿಯನ್ನೋ ಅನ್ವೇಷಿಸುತ್ತಿರುವ ಅಡರುಬಳ್ಳಿ** | **ವೃತ್ತಾಕಾರದ ಜೇಡ/ದುಂಡು ತಲೆಯ ಜೇಡ** | **ಬ್ರೆಡ್/ಗೋಡೆಗಳ ಮೇಲಿನ ಬೂಷ್ಟು** |
| **ಕಣಜಗಳು** | **ಹಲ್ಲಿ/ಹಕ್ಕಿಗಳ ಹಿಕ್ಕೆ** | **ಬಿರುಹೆಜ್ಜೆಗಳಿಂದ ಓಡಾಡುವ ಇಲಿಗಳು/ಹೆಗ್ಗಣಗಳು/ಹಂದಿ ಹೆಗ್ಗಣ** |

**ಪ್ರಕೃತಿ ತರಗತಿಗಳು** ನೈಜಪ್ರಕೃತಿ ಮತ್ತು ಕಲಿಕೆಯ ನಡುವೆ ಸಂಪರ್ಕ ಕಲ್ಪಿಸಲು ಶಾಲೆಗಳು ಮತ್ತು ಶಿಕ್ಷಕರೊಂದಿಗೆ ಕೆಲಸ ಮಾಡುತ್ತವೆ. ಈ ತಂಡವು ವೀಣಾ ಕಪೂರ್, ರೋಷನಿ ರವಿ ಮತ್ತು ಲಬೊನಿ ರಾಯ್ ಎಂಬುವರನ್ನು ಒಳಗೊಂಡಿದೆ. ಇವರು ಸುಸಂಗತವಾದ ಮತ್ತು ಸ್ಫುಟವಾದ ಪ್ರಕೃತಿ ಕಲಿಕಾ ಸಂಪನ್ಮೂಲಗಳನ್ನು ಸಿದ್ಧಪಡಿಸುತ್ತಾರೆ. ಇವು ಪ್ರಾಥಮಿಕ ಶಾಲೆಯ ಪರಿಸರ ಅಧ್ಯಯನ ಪಠ್ಯಕ್ರಮಕ್ಕೆ ಹೊಂದಿಕೊಳ್ಳುವಂತಿರುತ್ತವೆ. ಅವರು ಶಿಕ್ಷಕರ ಮತ್ತು ಶಿಕ್ಷಣ ತಜ್ಞರ ಸಾಮರ್ಥ್ಯ ನಿರ್ಮಾಣದಲ್ಲಿ ತಮ್ಮನ್ನು ತೊಡಗಿಕೊಂಡಿದ್ದಾರೆ.

---